**ಓ.ಎಸ್. ನಂಬರ್‌ಃ 72/2022** **ಡಿ ಡಬ್ಲೂಃ 1**

ದಿಃ 15-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು:-** ಪ್ರತಿವಾದಿ ಪರ ಶ್ರೀ ಎಸ್ ಬಿ ಎಂ ವಕೀಲರಿಂದಃ-

ನಾನು ಎಲೆಕ್ಟ್ರೀಷಿಯನ್ ಎಂದು ಕೆಲಸ ಮಾಡುತ್ತಿದ್ದೇನೆ. ನಾನು ಸರ್ಕಾರಿ ಕಛೇರಿಗಳಿಗೆ ಕೂಡ ಎಲೆಕ್ಟ್ರೀಷಿಯನ್ ಆಗಿ ಹೊರಗುತ್ತಿಗೆದಾರ ಆದಾರದ ಮೇಲೆ ಕೆಲಸ ಮಾಡುತ್ತೇನೆ ಎಂದರೆ ಸರಿ. ನನ್ನ ಮನೆಯ ಸಂಖ್ಯೆ 2-2-72 ಎಂದರೆ ಸರಿ. ನನ್ನ ಮನೆಯ ಹಿಂದುಗಡೆ ವಾದಿಯವರು ಮನೆ ಇರುತ್ತದೆ ಎಂದರೆ ಸರಿ. ನನ್ನ ಮತ್ತು ವಾದಿಯವರ ನಡುವೆ 8 ಅಡಿ ಸಂದಿ ಇರುತ್ತದೆ ಎಂದರೆ ಸಾಕ್ಷಿಯು 3 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಅದರಲ್ಲಿ 4 ಫೀಟು ಜಾಗ ವಾದಿಗೆ ಸೇರಿದ್ದು ಇರುತ್ತದೆ ಹಾಗೂ ಇನ್ನೂಳಿದ ಜಾಗ ಸಂದಿ ಇದೆ ಎಂದರೆ ಸರಿಯಿಲ್ಲ. ನನ್ನ ಮನೆ ಟಾರು ರಸ್ತೆಯಿಂದ 7 ಫೀಟು ಎತ್ತರದಲ್ಲಿ ಇದೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ನಿ ಪಿ 19 ನ್ನು ತೋರಿಸಲಾಗಿ ಅದರಲ್ಲಿ ನನ್ನ ಮನೆ ಟಾರು ರಸ್ತೆಯಿಂದ 3 ರಿಂದ 4 ಅಡಿ ಎತ್ತರದಲ್ಲಿ ಇದೆ ಎಂದರೆ ಸರಿಯಿಲ್ಲ. ನಾನು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ 3 ರಿಂದ 4 ಅಡಿ ಚತ್ತು ಹಾಕಿದ್ದೇನೆ ಎಂದರೆ ಸಯಿಲ್ಲ. ನಿ ಪಿ 19 ರಲ್ಲಿರುವ ಮನೆ ಗೊಡೆ ನನಗೆ ಸೇರಿದ್ದು ಇರುತ್ತದೆ ಎಂದರೆ ಸರಿಯಿಲ್ಲ. ಟಿ ಎಂ ಸಿ ಅಧಿಕಾರಿಗಳು ನಮ್ಮ ಚತ್ತು ರಸ್ತೆಯ ಮೇಲೆ ಬಂದಿರುವುದರಿಂದ ಅರ್ಧ ತೆಗೆದಿರುತ್ತಾರೆ ಹಾಗೂ ಇನ್ನುಳಿದ ಹಂಗೆ ಉಳಿದುಕೊಂಡಿದೆ ಎಂದರೆ ಸರಿಯಿಲ್ಲ. ಸದರಿ ಅಧಿಕಾರಿ ವರ್ಗಾವಣೆಯಾದಾಗ ನಾನು ಮತ್ತೊಮ್ಮೆ ಕಟ್ಟಡ ಪ್ರಾರಂಭಿಸಿರುತ್ತೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಸದರಿ ರಸ್ತೆಯ ಮೇಲೆ ಎರಡು ಟಾಯ್ ಲೆಟ್ ಕಟ್ಟಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಿಲ್ಲ. ಈ ಬಗ್ಗೆ ವಾದಿಯವರು ತಕರಾರು ಮಾಡಿದ್ದಾರೆ ಎಂದರೆ ಸರಿಯಿಲ್ಲ. ಪುರಸಭೆದವರು ಯಾವುದೇಕ್ರಮ ಕೈಗೊಳ್ಳದೇ ಇರುವುದರಿಂದ ವಾದಿಯವರು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಿಲ್ಲ. ನಾನು ಈ ದಾವೆಯಲ್ಲಿ ನಿರ್ಬಂದಾಜ್ಞೆ ಆದೇಶ ಇರುವುಂದರಿಂದ ವಾದಿಯವರ ವಿರುದ್ದ ಅಸಲು ದಾವೆ ಸಂಖ್ಯೆ 11/2023 ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಟಿ ಎಂ ಸಿ ಮುಖ್ಯ ಅಧಿಕಾರಿಗಳಿಗೆ 7 ನೇ ಪ್ರತಿವಾದಿ ಎಂದು ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಟಿ ಎಂ ಸಿ ಸೇಡಂ ದವರು ನನ್ನ ಪರವಾನಗಿ ರದ್ದು ಪಡಿಸಲು ಹಿಂಬರಹ ನೀಡಿದ್ದರು ಎಂದರೆ ಗೊತ್ತಿಲ್ಲ. ನಂತರ ದಿ.22-12-2024 ರಂದು ನಾನು ಟಿ ಎಂ ಸಿ ಸೇಡಂ ರವರಿಗೆ ಕಟ್ಟಡ ಪರವನಾಗಿ ನೀಡಲು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಇಲ್ಲಿಯ ವರೆಗೂ ಪುರಸಭೆ ದವರು

ಕಟ್ಟಡ ಪರವಾನಗಿ ನೀಡಿಲ್ಲ ಎಂದರೆ ಸರಿಯಿಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನನ್ನ ಮನೆ 1 ನೇ ಮಹಡಿಯ ವರೆಗೆ ಕಟ್ಟಿದ್ದೇನೆ. ನಾನು ಎರಡನೇ ಮಹಡಿಯ ವರೆಗೆ ಮನೆ ಕಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಗಡು ಹಾಕಿದ್ದೇನೆ ಎಂದು ನುಡಿಯುತ್ತಾರೆ. ನಾನು ಟಾಯಿಲೆಟ್ ಕಟ್ಟಡ ಕಟ್ಟಿರುವುದರಿಂದ ಕುಡಿಯುವ ನೀರಿಗೆ ಪರಣಾಮ ಆಗುತ್ತದೆ ಎಂದರೆ ಸರಿಯಿಲ್ಲ. ವಾದಿಯವರು ಮನೆ ಸಂಖ್ಯೆ 1-10-61 ಇದೆ ಎಂದರೆ ಸರಿ. ಅವರ ಮನೆಯ ಅಳತೆ 54 X 30 ಇರುತ್ತದೆ ಎಂದರೆ ಸಾಕ್ಷಿಯು 21 X 50 ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ ಪಿ 2 ನ್ನು ತೋರಿಸಲಾಗಿ ವಾದಿಯ ಮನೆಯ ವಿಸ್ತೀರ್ಣ 31 X 50 ಇದೆ ಎಂದರೆ ಸಾಕ್ಷಿಯು ಅವರು ಖರೀದಿ ಮಾಡಿದ್ದು ಬರೆ 21 X 50 ಎಂದು ನುಡಿಯುತ್ತಾರೆ. ವಾದಿಯವರು 50 ಫೀಟು ಅಷ್ಟೆ ಮನೆ ಕಟ್ಟಿರುತ್ತಾರೆ ಹಾಗೂ 4 ಫೀಟು ಬಿಟ್ಟಿದ್ದಾರೆ ಎಂದರೆ ಸಾಕ್ಷಿಯು ಅದು ಸಾರ್ವಜನಿಕ ರಸ್ತೆ ಇರುತ್ತದೆ ಎಂದುನುಡಿಯುತ್ತಾರೆ. ನನಗೆ ಮತ್ತು ಗಲ್ಲಿಗೆ ಯಾವುದೇ ಸಂಬಂದ ಇಲ್ಲ ನಾನು 3 ಫೀಟು ಒತ್ತುವರಿ ಮಾಡಿ ಚತ್ತು ಹಾಕಿದ್ದೇನೆ ಎಂದರೆ ಸರಿಯಿಲ್ಲ. ನಾನು ಪ್ರತಿವಾದ ಸಲ್ಲಿಸುವಾಗ ದಾಖಲಾತಿಗಳನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**